ಮ್ಯಾಕೆಲ್ ಸಲುವಾಗಿ ವಿಸ್ಕಿ ಸೋಡಾಗಳನ್ನೂ ತಯಾರು ಮಾಡಿ ಗ್ಲಾಸುಗಳನ್ನು ಅವರವರ ಕೈಗೆ ಕೊಟ್ಟ. ಧೋಂಡೂ ಎಂದಿನ ಪರಿಪಾಠದಂತೆ ಒಂದು ಪ್ಲೇಟಿನಲ್ಲಿ ವೇಫರ್ಸ್ ಇನ್ನೊಂದರಲ್ಲಿ ಹುರಿದ ಗೇರುಬೀಜ ತಂದು ಮುಂದುರಿಸಿದ. ಮುದುಕನ ಮನೆಯಲ್ಲಿ ನಡೆದುದರ ವರದಿ ಈಗ ಮುಂದುವರೆಯುತ್ತಿದೆಯೆಂದು ಗೊತ್ತಿದ್ದ ಧೋಂಡೂ ಇಂಗ್ಲಿಷ್‌ನಲ್ಲಿ ಮಾತನಾಡದಿದ್ದರೆ ಸಾಕು ಎಂದು ಮನಸ್ಸಿನಲ್ಲೇ ಪ್ರಾರ್ಥಿಸಿದ. ಆದರೆ ಈ ಕ್ರಿಸ್ತೀ ಗೃಹಸ್ಥನಿಗೆ ಗುಜರಾಥಿ ಹೇಗೆ ಬರಬೇಕು. ಆದರೆ ಮುದುಕನ ಕತೆಯೆಂದ ಮೇಲೆ ಯಾವ ಭಾಷೆಯಲ್ಲಾದರೇನಂತೆ! ತನ್ನ ಇಂಗ್ಲಿಷೂ ಪೂರ ಕೆಲಸಕ್ಕೆ ಬಾರದ್ದಲ್ಲವಲ್ಲ ಎಂದು ಕೊಂಡು ಡಾಯನಿಂಗ್ ಟೇಬಲ್ ಹತ್ತಿರವೇ ನಿಂತುಕೊಂಡ. ಪಾರ್ವತಿಗೆ ಮಾತ್ರ ಡಾಯನಾಳ ಇದಿರು ಹೊರಗೆ ಬರುವ ಧೈರ್ಯವಾಗಲಿಲ್ಲ.

ಮ್ಯಾಕೆಲ್ ಒಂದು ಬ್ಯಾಂಕಿನಲ್ಲಿ ಕೆಲಸ ಮಾಡುತ್ತಾನೆ. ಮೂಲತಃ ಗೋವೆಯವನು. ಅವನ ಅಪ್ಪ ಹಾಗೂ ಒಬ್ಬ ಅಣ್ಣ ಅಲ್ಲಿಯ ಒಂದು ದೊಡ್ಡ ಪತ್ರಿಕಾ ವ್ಯವಸಾಯದ ಬಗ್ಗೆ ನಿಜವಾದ ಪ್ರೀತಿಯುಳ್ಳವನು ಮ್ಯಾಕೆಲ್‌ನೆಂದೇ ಹೇಳಬೇಕು. ಗೆಳೆಯರ ನೆರವಿನಿಂದ 'ಬ್ಯಾಂಡ್ ಸ್ಟ್ಯಾಂಡ್ ನ್ಯೂಸ್' ಎಂಬ ಹೆಸರಿನ ನಾಲ್ಕು ಪುಟಗಳ ಒಂದು ಸಣ್ಣ ವಾರಪತ್ರಿಕೆಯನ್ನು ಕೆಲವು ಕಾಲದ ಹಿಂದೆ ಆರಂಭಿಸಿದ್ದ. ಮೂರೇ ತಿಂಗಳಲ್ಲಿ ಆರ್ಥಿಕ ಮುಗ್ಗಟ್ಟಿನಿಂದಾಗಿ ಬಂದುಬಿದ್ದಿತ್ತು. ಮತ್ತೆ ಆರಂಭಿಸುವ ಅವಕಾಶಕ್ಕಾಗಿ ಹಾದಿ ಕಾಯುತ್ತಿದ್ದ ಮ್ಯಾಕೆಲ್‌ನ ಕಿವಿಗಳ ಮೇಲೆ ಅಚಾನಕವಾಗಿ ಬಿದ್ದ ಈ ವಿಲಕ್ಷಣ ಕತೆ ತನ್ನ ನಿಂತುಹೋದ ಪತ್ರಿಕೆಯನ್ನು ಮತ್ತೆ ಆರಂಭಿಸಲು ತಕ್ಕ ಪ್ರೇರಣೆಯಾಗಿ ಕಂಡಿತು. ಜೀವನಮಾನವಿಡೀ ಕಳೆದು ಹೋದವನ ಶೋಧದಲ್ಲಿದ್ದವನ ಕತೆ ವಿಷಾದಪೂರ್ಣವಾದಂತೆ ಸ್ಫೂರ್ತಿದಾಯಕವೂ ಆಗಿತ್ತು. ಯಾರೊಬ್ಬರೂ ಮಾತನಾಡಲಿಲ್ಲ. ಕೆಲಹೊತ್ತು ಪಾನೀಯದ ಗ್ಲಾಸುಗಳನ್ನೆತ್ತಿಕೊಂಡಾಗ 'ಚಿಯರ್ಸ್' ಕೂಡ ಎನ್ನದೆಯೇ ಬರಿದೇ ಒಬ್ಬರೊಬ್ಬರ ಇದಿರಿಗೆ ಹಿಡಿದು ತುಟಿಗೆ ಹಚ್ಚಿದರು.

''ನನ್ನನ್ನು ಬಲವಾಗಿ ಅಲ್ಲಾಡಿಸಿಬಿಟ್ಟದ್ದು...'' ಏನೋ ಮಾತನಾಡಲು ಹೊರಟ ಸೋರಾಬ ಹೆಂಡತಿಯ ಮೋರೆ ನೋಡಿ ತಡೆದ. ಬದುಕಿನ ಬಗೆಗೆ ಅತ್ಯಂತ ವ್ಯಾವಹಾರಿಕ ದೃಷ್ಟಿಯುಳ್ಳ ಡಾಯನಾ ಕೂಡ ಇಷ್ಟೊಂದು ಭಾವುಕಳಾದದ್ದನ್ನು ಅವನು ನೋಡಿಯೇ ಇರಲಿಲ್ಲ. ಅವರ ಒಬ್ಬನೇ ಒಬ್ಬ ಮಗ ಖುರೂಷ ಪಂಚಗಣಿಯ ಪಬ್ಲಿಕ್ ಸ್ಕೂಲಿನಲ್ಲಿ ಕೊನೆಯ ವರ್ಷಕ್ಕೆ ಓದುತ್ತಿದ್ದ. ತಿಂಗಳಿಗೆ ಎರಡು ಸಾರೆಯಾದರೂ ಹಾಸ್ಟೆಲ್ ಫೋನಿನ ಮೇಲೆ ಮಾತನಾಡಿದಾಗಲೇ ತಾಯಿಗೆ ಸಮಾಧಾನ. ಹೋದ ಶನಿವಾರವಷ್ಟೇ ಮಾತನಾಡಿಯಾಗಿದೆ. ಆದರೂ ರಾವ್‌ಜೀಭಾಯಿಯ ಒಂದು ಮಾತಿನಿಂದ ಮನಸ್ಸು ಕಲಕಿದವಳಾಗಿ ಒಮ್ಮೆಲೇ ಅಂತರ್ಮುಖಿಯಾಗಿದ್ದಾಳೆ ಎಂಬುದನ್ನು ಅರಿತ ಸೋರಾಬ. ''ಡಾರ್ಲಿಂಗ್, ಖುರೂಷನೊಡನೆ ಮಾತನಾಡಬೇಕು ಅನ್ನಿಸಿದರೆ ಫೋನ್ ಮಾಡಲು ಅಡ್ಡಿಯಿಲ್ಲ, ಒಳಗಿಂದಲೇ ಮಾಡು. ಅರ್ಜೆಂಟ್ ಕಾಲ್ ಬುಕ್ ಮಾಡಿ ಕೋಣೆಯ ಕದ ತೆರೆದಿಟ್ಟು ಬಾ'' ಎನ್ನುತ್ತಲೇ ಡಾಯನಾ ಮಲಗುವ ಕೋಣೆಗೆ ಧಾವಿಸಿದಳು.

ಸೋರಾಬ್‌ಗೆ ತಾನು ಹೇಳಲು ಹೊರಟದ್ದಕ್ಕೆ ಹೆಂಡತಿಯ ಅನುಪಸ್ಥಿತಿ ಬೇಕಾದಂತಿತ್ತು, ''ಡಾಯನಾ ತಿರುಗಿ ಬರುವ ಮೊದಲೇ ನಮ್ಮನ್ನೆಲ್ಲ ತಟ್ಟಿದ ಒಂದ ಸಂಗತಿಯನ್ನು ಕುರಿತು ಹೇಳುತ್ತೇನೆ. ಮಧ್ಯಾಹ್ನ ಬಂದ ಹುಡುಗ ತನ್ನ ಮೊಮ್ಮಗನೇ ಎಂದು ತಿಳಿದ ರಾವ್‌ಜೀಭಾಯಿಗೆ ನಾವು ಹೇಳಿದ್ದಿಷ್ಟೇ: 'ನೀವು ಕಳಕೊಂಡ ಮಗ ಹತ್ತು ವರ್ಷದವನಾಗಿರಬೇಕಾದ ಕಾಲದಲ್ಲೇ ನಿಮ್ಮ ಮನೆಗೆ ಬಂದ ಡೊಂಬನ ಜೊತೆಗೆ ಅದೇ ವಯಸ್ಸಿನ ಹುಡುಗನಿದ್ದುದು ಒಂದು ದಿವ್ಯ